ಇದರ ಗೋಳು ನೋಡಲಾರ್ದೆ ಬೆಂಕಿ ಧಗಧಗ ಉರೀತಿತ್ತು. ಮುತ್ತುಬಳವಾ ಅದರ ಹತ್ರ ಕಷ್ಟ ಹೇಳಿಕೊಳ್ತು. 'ಆ ಮುದುಕನ ಮೀಸೆ ಸುಡು, ಆ ಮುದುಕ ನಾಯಿಗೆ ಹೊಡಿತಾನೆ. ನಾಯಿ ಬೆಕ್ಕಿನ ಕಿವಿ ಕಚ್ಚುತ್ತದೆ. ಬೆಕ್ಕು ಇಲಿ ಬಾಲ ಹಿಡಿಯುತ್ತದೆ. ಇಲಿ ಹುಡುಗನಿಗೆ ಕಚ್ಚಿ ಹೆದರಿಸಿದರೆ ಆ ಹುಡುಗ ಮೊಟ್ಟೆಗಳನ್ನು ತೆಗೆದುಕೊಡ್ತಾನೆ' ಎಂದಿತು. ಅದನ್ನು ಕೇಳಿದ ಬೆಂಕಿ ಇದ್ದದ್ದು 'ಹೋ ನಿಂಗೆ ಕೆಲಸ ಇಲ್ಲ ಹೋಗು ಹೋಗೋಗು ಸುಮ್ನೆ' ಅಂದಿತು.

ಮುತ್ತುಬಳವನ ಹಕ್ಕಿಗೆ ಅತ್ತು ಅತ್ತು ಸಾಕಾಗಿ ನೀರು ಕುಡಿಯೋಣ ಅಂತ ಪಕ್ಕದಾಗೆ ಇರೋ ಹೊಂಡಕ್ಕೆ ಬಂದಿತು. ಆ ಹೊಂಡದಲ್ಲಿರೋ ನೀರು ಮುತ್ತಾಬಳವನಾ ಕಣ್ಣೀರು ನೋಡಿ 'ಮುತ್ತುಬಳವಕ್ಕಾ ಯಾಕೆ ಅಳ್ತಿಯಾ?' ಎಂದಿತು. ಆಗ ಮುತ್ತಾಬಳವನ ಹಕ್ಕಿ ಮತ್ತೆ ತನ್ನ ಎಲ್ಲಾ ಹಿಂದಿನ ಕಥೆಯನ್ನು ಹೇಳಿ ಹೊಂಡದಲ್ಲಿನಾ ನೀರಿಗೆ ಬೇಡಿಕೊಂಡಿತು. 'ನೀ ಹೋಗಿ ಆ ಬೆಂಕಿಯನ್ನು ಆರಿಸು, ಆ ಬೆಂಕಿ ಮುದುಕನ್ನ ಮೀಸೆಯನ್ನು ಸುಡುತ್ತದೆ. ಆ ಮುದುಕ ನಾಯಿಗೆ ಹೊಡಿಯುತ್ತಾನೆ. ನಾಯಿಯು ಬೆಕ್ಕಿನ ಕಿವಿ ಕಚ್ಚುತ್ತದೆ. ಬೆಕ್ಕು ಇಲಿಯ ಬಾಲ ಹಿಡಿಯುತ್ತದೆ, ಆ ಇಲಿಯು ಹೆದರಿ ಹುಡುಗನನ್ನು ಕಚ್ಚುತ್ತದೆ. ಆ ಹುಡುಗ ಮೊಟ್ಟೆಗಳನ್ನು ತೆಗೆದುಕೊಡುತ್ತಾನೆ' ಎಂದು ಹೇಳಿತು. ಆ ನೀರು ಹೇಳಿತು. 'ಅಯ್ಯೋ ನಾನು ಆ ಕೆಲಸವೆಲ್ಲ ಮಾಡಲ್ಲ ಹೋಗು' ಅಂತ ಹೆದರಿಸಿತು. ಮುತ್ತಾಬಳವಾ ಹಕ್ಕಿ ಅಳ್ತಾ ನಿಂತ್ಕೊಂಡುಬಿಟ್ಟಿತು.

ಆಗ ಅಲ್ಲೆ ನಿಂತಿದ್ದ ಕೋಳಿಯೊಂದು ಮುತ್ತುಬಳವಾನ ದುಃಖವನ್ನು ನೋಡಲಾರದೆ ಓಡಿ ಹೋಗಿ ನೀರೊಳಗೆ ಮುಳಗಿ, ಬೆಂಕಿ ಹತ್ತಿರ ಬಂದು ನೀರೆಲ್ಲವನ್ನು ಬೆಂಕಿಗೆ ಕೊಡವತೊಡಗಿತು. ಆಗ ಕಂಗಾಲಾದ ಬೆಂಕಿ 'ಅಯ್ಯೋ ಎಂತಾ ಮಾಡ್ತಾ ಇದೀಯಾ ಮಾರಾಯತಿ' ಎಂದು ಕೂಗೋದಕ್ಕೆ ಆರಂಭಿಸಿತು. ಆಗ ಕೋಳಿಯು ಬೆಂಕಿಗೆ ಮುತ್ತಾಬಳವನ ಹಕ್ಕಿಯ ಎಲ್ಲ ಕಥೆಯನ್ನು ಹೇಳಿ 'ನೀನು ಉಳಿಯಬೇಕೆಂದರೆ ಅಜ್ಜನ ಮೀಸೆಯನ್ನು ಸುಡು, ಅಜ್ಜ ನಾಯಿಯನ್ನು ಹೊಡೆಯುತ್ತಾನೆ. ನಾಯಿ ಬೆಕ್ಕಿನ ಕಿವಿಯನ್ನು ಕಚ್ಚುತ್ತದೆ, ಬೆಕ್ಕು ಇಲಿಯ ಬಾಲವನ್ನು ಕಚ್ಚುತ್ತದೆ, ಇಲಿ ಹುಡುಗನನ್ನು ಕಚ್ಚುತ್ತದೆ, ಹುಡುಗ ಹೆದರಿ ಮೊಟ್ಟೆಯನ್ನು ತೆಗೆದುಕೊಡುತ್ತಾನೆ' ಎಂದ ತಕ್ಷಣ ನೀರಿಗೆ ಹೆದರಿದ ಬೆಂಕಿಯು ಅಜ್ಜನ ಮೀಸೆಯನ್ನು ತಕ್ಷಣ ಸುಟ್ಟಿತು. ಮುದುಕ ತಡಬಡಾಯಿಸಿ ನಾಯಿಗೆ ಓಡಿಹೋಗಿ ಹೊಡೆದ, ಆ ನಾಯಿ ಬೆಕ್ಕಿನ ಕಿವಿಯನ್ನು ಕಚ್ಚಿತು, ಬೆಕ್ಕು ಇಲಿಯ ಬಾಲವನ್ನು ಹಿಡಿಯಿತು, ಇಲಿ ಓಡಿಹೋಗಿ ಹುಡುಗನ ಕಾಲನ್ನು ಕಚ್ಚಿತು. ಹುಡುಗ ಮುತ್ತಾಬಳವನ ಮೊಟ್ಟೆಗಳನ್ನು ತೆಗೆದು ಗೂಡೊಳಗೆ ಹಾಕಿದ. ಮುತ್ತಾಬಳವನ ಹಕ್ಕಿ ಖುಷಿಯಿಂದ ತನ್ನ ಮೊಟ್ಟೆಯ ಮೇಲೆ ಬಂದು ಕುಳಿತುಕೊಂಡಿತು.

■ ಕಥೆ ಹೇಳಿದವರು: **ರೇಣುಕಮ್ಮ ಶಿವಪ್ಪ ಮಾಸ್ತಾರ್, ಚಂದ್ರಗುತ್ತಿ**

ಬರಹ ರೂಪ: ಮೋಹನ್ ಚಂದ್ರಗುತ್ತಿ



# ಹಣ್ಣುಮಾರುವ ಹುಡುಗಿ

■ **ವೆಂಕಟೇಶ ಬೈಲೂರು**

ಹಳ್ಳಿಯ ಹುಡುಗಿ ತೆಳ್ಳನೆ ಬೆಡಗಿ
ಹಣ್ಣನು ಮಾರುತ ಬರುತಿಹಳು
ಬಗೆ ಬಗೆ ಹಣ್ಣನು ಬುಟ್ಟಿ ತುಂಬ
ಹೊತ್ತು ಬೀದಿಗಳ ಸುತ್ತಿಹಳು

ನೇರಳೆ ಹಣ್ಣು ಪೇರಳೆ ಹಣ್ಣು
ಬೇಕೆ ನಿಮಗೆ ಎನುತಿಹಳು
ಬೋರೆ, ಕಾರೆ, ಸಂಪಿಗೆ ಹಣ್ಣನು
ಮಾರುತ ಹಣವನು ಎಣಿಸುವಳು

ಜಂಬೆ ಹಣ್ಣು ಕವಳಿ ಹಣ್ಣು
ಗೋಲಿಯ ಗಾತ್ರದ ಅಂಜೂರ
ತಿಂದರೆ ಇದಕೆ ಸಾಟಿಯೆ ಹೇಳಿ
ಪೇಟೆ ಅಂಗಡಿಯ ಖರ್ಜೂರ

ಕಾಡಿನ ತಾಜಾ ಹಣ್ಣಿನ ರುಚಿಯ
ತಿಂದರೆ ಎಂದಿಗೂ ಮರೆಯಲ್ಲ
ಔಷಧಿ ಗುಣದ ಹಣ್ಣನು ಮೆದ್ದರೆ
ರೋಗವು ಹತ್ತಿರ ಸುಳಿಯಲ್ಲ

■